**OS. 67/2016**
**-PW-3**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಐ ಅರ್ ಎಸ್ ವಕೀಲರಿಂದ</u>**

1. ನಾನು ಪಿರಿಯಾಪಟ್ಟಣ ತಾಲ್ಲೂಕಿನ ಮಂಚದೇವನಹಳ್ಳಿ ಗ್ರಾಮದಲ್ಲಿ ವಾಸ ಇದ್ದೇನೆ. ಸಾಕ್ಷಿಯಾಗಿ ಬರುವಂತೆ ನನ್ನನ್ನು 1 ನೇ ಪ್ರತಿವಾದಿ ಕರೆದಿರುತ್ತಾರೆ. ನಿಪಿ-1 ರ ವ್ಯವಹಾರದಲ್ಲಿ ನಾನು ಭಾಗಿಯಾಗಿರುವುದಿಲ್ಲ. ನನ್ನನ್ನು ವಸಂತ್ ಕುಮಾರ್ ರವರ ಕಚೇರಿಗೆ 1 ನೇ ಮತ್ತು 2 ನೇ ಪ್ರತಿವಾದಿ ಕರೆದಿರುತ್ತಾರೆ.

2. ವಾದಿಯನ್ನು ಸುಮಾರು 15 ವರುಷದಿಂದ ಪರಿಚಯ ಇದೆ. ವಾದಿಯನ್ನು 1 ನೇ ಪ್ರತಿವಾದಿಗೆ ಯಾರು ಪರಿಚಯಿಸಿದ್ದಾರೆಂದು ಗೊತ್ತಿಲ್ಲ.

3. ನಾನು ವಸಂತ್ ಕುಮಾರ್ ರವರ ಕಚೇರಿಗೆ ಹೋಗುವ ಮೊದಲೇ ನಿಪಿ-1 ರ ವ್ಯವಹಾರದ ಮಾತುಕತೆ ಮುಗಿದಿತ್ತು. ಎಷ್ಟು ಮೊತ್ತಕ್ಕೆ ವ್ಯವಹಾರ ಆಗಿದೆ ಎಂದು ವಸಂತ್ ಕುಮಾರ್ ರವರ ಕಚೇರಿಯಲ್ಲಿ ನನಗೆ ಗೊತ್ತಾಗಿರುತ್ತದೆ. ನನ್ನನ್ನು ಸಾಕ್ಷಿಯಾಗಿ ಸಹಿ ಮಾಡಲು ಕರೆದಿರುವ ಕಾರಣ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ನಿಪಿ-1 ದಾಖಲೆಯನ್ನು ಸ್ವಲ್ಪ ಓದಿರುತ್ತೇನೆ.

4. ನಿಪಿ-1 ರಲ್ಲಿ ನಮೂದಿಸಿರುವ ಆಸ್ತಿಯ ಸ. ನಂ. 12/2. ಸದರಿ ಆಸ್ತಿಯ ಚೆಕ್ಕುಬಂದಿ ಸರಿಯಾಗಿ ಗೊತ್ತಿಲ್ಲ. 2 ಎಕರೆ 7 ಗುಂಟೆಗೆ ವ್ಯವಹಾರ ಆಗಿರುತ್ತದೆ.

5. ಎಷ್ಟು ವರುಷದ ಅವಧಿಯ ನಂತರ ನೊಂದಾಯಿತ ಕ್ರಯ ಸಾಧನ ಬರೆದು ಕೊಡಬೇಕಾಗಿತ್ತು ಎಂದು ಗೊತ್ತಿಲ್ಲ. ನಿಪಿ-1 ದಾಖಲೆಯನ್ನು ತಯಾರಿಸಲು ವಾದಿ, 1 ನೇ ಪ್ರತಿವಾದಿ , 2 ನೇ ಪ್ರತಿವಾದಿ , 2 ನೇ ಪ್ರತಿವಾದಿಯ ಹೆಂಡತಿ ಮತ್ತು ಸೋಮಯ್ಯ ರವರ ಇಬ್ಬರು ಹೆಣ್ಣು ಮಕ್ಕಳು ಮಾಹಿತಿ ನೀಡಿರುತ್ತಾರೆ. 1 ನೇ ಪ್ರತಿವಾದಿಯನ್ನು ತುಂಬಾ ವರುಷದಿಂದ ಪರಿಚಯವಿದೆ. ಹೇಳಿದ ದಿನಾಂಕದಂದು ವಾದಿ ಕ್ರಯ ಸಾಧನವನ್ನು ಬರೆಸಿಕೊಳ್ಳದೇ ಇರುವ ಕಾರಣ 7 ನೇ ಪ್ರತಿವಾದಿಗೆ 1 ರಿಂದ 6 ನೇ ಪ್ರತಿವಾದಿಯರು

ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸೋಮಯ್ಯ ರವರು ದಾಖಲೆಗಳನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾಖಲೆಗಳನ್ನು ನೀಡಿರುವುದಿಲ್ಲ ಎನ್ನುವ ವಿಚಾರ ವಾದಿಯ ಮೂಲಕ ಗೊತ್ತಾಗಿರುತ್ತದೆ. ಆ ನಂತರ 7 ನೇ ಪ್ರತಿವಾದಿ, 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 8 ನೇ ಪ್ರತಿವಾದಿ 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

6. 9 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸ ಇದ್ದಾರೆ ಎಂದರೆ ಗೊತ್ತಿಲ್ಲ. ನಿಪಿ–1 ದಾಖಲೆಯ ಷರತ್ತಿನ ಪ್ರಕಾರ ವಾದಿ ನಡೆದುಕೊಳ್ಳದೇ ಇರುವ ಕಾರಣ 1 ರಿಂದ 6 ನೇ ಪ್ರತಿವಾದಿಯರು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 7 ರಿಂದ 9 ನೇ ಪ್ರತಿವಾದಿಯರಿಗೆ ಮಾರಾಟವಾದ ನಂತರ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಹಾಗೂ ಹಣವನ್ನು ನೀಡಿರುವುದಿಲ್ಲ ಆದಕಾರಣ ದಾವಾ ಆಸ್ತಿಯನ್ನು ತಾನೇ ಪಡೆದುಕೊಳ್ಳಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಪರಿಚಯ ಇರುವ ಕಾರಣ ವಾದಿಯ ಮಾತುಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

1 ನೇ **ಹೆಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
ಪಿರಿಯಾಪಟ್ಟಣ.